


ಎಂದು ಕೇಳಿದರೆ 'ಇಲ್ಲ' ಎನ್ನುವ ಉತ್ತರವೇ ಬಹುತೇಕ ಕಡೆ ಸಿಗುತ್ತದೆ. ಮನೆಯಲ್ಲಿರುವ ಕುಟುಂಬ ಸದಸ್ಯರ ನಡುವೆಯೇ ಬಹಳ ಸಂದರ್ಭ, ಸಂಪರ್ಕ ಸಂವಹನ ಹೊರಟುಹೋಗಿದೆ. ಇದಕ್ಕೆ ಕಾರಣ ಹಲವು.

ಟೀವಿ ಮೊದಲ ಕಾರಣ. ಸಂಜೆಯ ಹೊತ್ತು ಮನೆಗಳಿಗೆ ಹೋದರೆ ಧಾರಾವಾಹಿಗಳನ್ನು ನೋಡುತ್ತಾ ಮಾತು ಮರೆತಿರುವ ಕುಟುಂಬ ಸದಸ್ಯರನ್ನು ಕಾಣಬಹುದು. ನಡುವೆ ಮಗನೋ, ಮಗಳೋ, ಸೊಸೆಯೋ, ಅಳಿಯನೋ ಅಥವಾ ಮೊಮ್ಮಕ್ಕಳೋ ಹೀಗೆ ಬಂದು ಹಾಗೆ ಹೋದರೂ ಮನೆಯ ಸದಸ್ಯರಿಗೆ ಗೊತ್ತಾಗುವುದೇ ಇಲ್ಲ. ಹೊರಗೆ ಹೋದವರು ಯಾರು? ಒಳಗೆ ಬಂದವರು ಯಾರು? ಯಾರಿಗೆ ಏನು ಬೇಕು? ಎನ್ನುವ ಪರಿವೆಯೇ ಇಲ್ಲದ ಸ್ಥಿತಿ ಎಷ್ಟೋ ಮನೆಗಳಲ್ಲಿ ಇದೆ. ಹೊರಗೆ ಹೋಗುವ ಯುವ ತಲೆಮಾರಿನವರು ಕೂಡ ಅಷ್ಟೆ. ಮನೆಯವರ ಬಳಿ ಇಂಥಲ್ಲಿಗೆ ಹೋಗುತ್ತೇವೆ ಎಂದು ಹೇಳಿ ಹೋಗುವ ಪದ್ಧತಿಯೇ ಎಷ್ಟೋ ಕಡೆಗಳಲ್ಲಿ ಇಲ್ಲ. ಒಂದೊಮ್ಮೆ ಮನೆಯ ಹಿರಿಯರು ಆ ಬಗ್ಗೆ ಕೇಳಿದರೆ 'ನಿಮಗೆ ಯಾಕೆ ಅದೆಲ್ಲ?' ಎನ್ನುವ ಉಡಾಫೆಯ ಉತ್ತರ ಯುವ ತಲೆಮಾರಿನ ಬಳಿ ಇರುತ್ತದೆ. ಧಾರಾವಾಹಿ ನೋಡಲು ತೊಂದರೆಯಾಗುತ್ತದೆ, ಮಕ್ಕಳಿಗೆ ಹೋಂವರ್ಕ್ ಹೇಳಿಕೊಡಲು ತೊಂದರೆಯಾಗುತ್ತದೆ ಇತ್ಯಾದಿ ಕಾರಣಗಳಿಗಾಗಿ ಸಂಪರ್ಕವನ್ನು ಕಳೆದುಕೊಂಡ ಒಂದು ತಲೆಮಾರು ಮನೆಯಲ್ಲಿ ಇದ್ದರೆ, ಮನೆಯಲ್ಲಿದ್ದವರ ಬಳಿ ಹೇಳಿ ಏನು ಉಪಯೋಗ? ಎಂದು ಭಾವಿಸುವ ಯುವ ತಲೆಮಾರು ಮತ್ತೊಂದು ಕಡೆ.

ಸಂಪರ್ಕ ಕಳೆದುಕೊಳ್ಳಲು ಇನ್ನೊಂದು ಮುಖ್ಯ ಕಾರಣ, ಮೊಬೈಲ್. ವಿಚಿತ್ರ ಎಂದರೆ ಮೊಬೈಲ್ ಎನ್ನುವುದು ಸಂಪರ್ಕಕ್ಕಾಗಿ ಇರುವ ಸಾಧನವಾಗಿದ್ದರೂ ಅದರ ಕಾರಣದಿಂದಾಗಿ ಮನೆ ಮಂದಿಯ ಜೊತೆಗಿದ್ದ ಸಂವಹನ ಕಳಕೊಂಡ ಮಂದಿಯನ್ನು ನಾವು ಕಾಣಬಹುದು. ಕೆಲವು ಸಮಯಗಳ ಹಿಂದೆ ವಾಟ್ಸಾಪ್‌ನಲ್ಲಿ ಒಂದು ಚಿತ್ರ ವೈರಲ್ ಆಗಿತ್ತು. ಪರವೂರಿನಲ್ಲಿದ್ದ ಮೊಮ್ಮಕ್ಕಳು–ಮಕ್ಕಳು ಅಜ್ಜಿಯನ್ನು ನೋಡಲು ಬಂದದ್ದು ಎನ್ನುವ ಚಿತ್ರ ಇತ್ತು. ಅದರಲ್ಲಿ ಅಜ್ಜಿ ಸೋಫಾದಲ್ಲಿ ಒಬ್ಬಳೇ ಕುಳಿತಿದ್ದರೆ, ಸುತ್ತಲೂ ಇದ್ದ ಮಕ್ಕಳು ಹಾಗೂ ಮೊಮ್ಮಕ್ಕಳು ಅವರವರ ಮೊಬೈಲ್ ಅನ್ನು ನೋಡುವುದರಲ್ಲಿ ತಲ್ಲೀನರಾಗಿದ್ದ ಚಿತ್ರ ಅಲ್ಲಿತ್ತು. ಇದು ವರ್ತಮಾನದ ದುರಂತವೊಂದರ ಚಿತ್ರಣ ಎಂದರೆ ತಪ್ಪಾಗಲಾರದು.

ಮಾತು ಎನ್ನುವುದು ಬುದ್ಧಿಜೀವಿ ಎನಿಸಿಕೊಂಡ ಮನುಷ್ಯನ ಮುಖ್ಯವಾದ ಒಂದು ಭಾಗ್ಯ ಎನ್ನಬಹುದು. ಆದರೆ ಇಂದು ಮಾತನ್ನು ಆಡದಿರುವುದೇ ಒಂದು ಹೆಚ್ಚುಗಾರಿಕೆ ಎನ್ನುವ ಮಟ್ಟಕ್ಕೆ ಬಂದು ತಲುಪಿದ್ದೇವೆ. ಸ್ನೇಹಿತರೊಬ್ಬರು ಮಹಾನಗರವೊಂದರ ಫ್ಲ್ಯಾಟ್‌ನಲ್ಲಿ ವಾಸಿಸುತ್ತಿದ್ದರು. ಅವರ ಮನೆಗೆ ಹೋದಾಗ 'ಎದುರಿನ ಮನೆಯಲ್ಲಿ ಯಾರಿದ್ದಾರೆ?' ಎಂದು ಕೇಳಿದೆ. 'ನನಗೆ ಗೊತ್ತಿಲ್ಲ. ನಾವು ಯಾರ ಸುದ್ದಿಗೂ ಹೋಗುವುದಿಲ್ಲ. ನಮ್ಮ ಬಗ್ಗೆ ಯಾರಿಗೂ ನಾವು ಹೇಳುವುದೂ ಇಲ್ಲ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

ಅವರು ಆ ಫ್ಲ್ಯಾಟ್‌ನಲ್ಲಿ ಮೂರು ವರ್ಷಗಳಿಂದ ವಾಸ ಮಾಡುತ್ತಿದ್ದರು. ಎಲ್ಲವೂ ಎಲ್ಲರ ಬಳಿಯೂ ಹೇಳಿಕೊಳ್ಳಲು ಆಗುವುದಿಲ್ಲ ಎನ್ನುವುದು ನಿಜ. ಆದರೆ ನಮ್ಮ ಎದುರು ಮನೆಯಲ್ಲಿ ಯಾರಿದ್ದಾರೆ? ಅವರ ಸುಖ ಕಷ್ಟಕ್ಕೆ ನಾವು, ನಮ್ಮ ಸುಖ ಕಷ್ಟಕ್ಕೆ ಅವರು ಸಿಗಬೇಕು ಎನ್ನುವ ಕನಿಷ್ಠ ಪ್ರಜ್ಞೆಯೂ ಇಲ್ಲದೇ ಇದ್ದರೆ ಮನುಷ್ಯರಾಗಿ ಏನು ಪ್ರಯೋಜನ?

ಮಾತನಾಡಿಸುವ ಪದ್ಧತಿಯಲ್ಲಿ ಕೆಲವರದ್ದು ಬೇರೆಯೇ ಆದ ರೀತಿ ನೀತಿಗಳಿರುತ್ತವೆ. ಅದು ಹೇಗೆ ಎಂದರೆ ಅಂತಸ್ತು, ಜಾತಿ, ಉದ್ಯೋಗ ಇತ್ಯಾದಿಗಳನ್ನು ನೋಡಿ ತಮಗೆ ಸರಿಸಮಾನರು